Handloom Development Project in Bijapur District

319 SRI B. M. HORAKERI (Guledgud).—Will the Minister of State for Small Scale Industries be pleased to state :—

(a) whether intensive handloom Develorment project has been taken up to cover the dense weavers centres of Guledgud, Kamatagi Aminagad. Sulibhavi. Gudur, Katageri, Kokanakoppa and Kerur ;

(b) if so, whether the survey work for identification of weavers families have been completed in these areas or not ;

(c) if not, the steps that have been taken to implement the Scheme speedily ?

SRI M. VEERAPPA MOILY—(Minister for State Small Scale Industries)

(a) No.

(b) Survey work has been completed in Ilkal and Kamatagi Centres.

(c) Does not arise.

ಶ್ರೀ ಬಿ. ಎಂ. ಹೊರಕೇರಿ.—ಇದರಲ್ಲಿ ಇಷ್ಟೆ. ಇಳ್ಕಲ್, ಗುಳೇದಗುಡ್ಡ ಟೌನ್‌ಗಳಲ್ಲಿ ವೀವರ್ಸ್ ಸೆಂಟರ್ಸ್ ಇವೆ. ಅಲ್ಲಿ ಪ್ರಾಜೆಕ್ಟ್ ತೆಗೆದುಕೊಳ್ಳಬೇಕಾದ್ದು ಸರಿ. ಆದರ ಜೊತೆಗೆ ಇನ್ನೂ ಕೂಡ ತೆಗೆದುಕೊಂಡಿಲ್ಲ. ಇದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸುತ್ತೀರಾ ಸ್ವಾಮಿ ?

ಶ್ರೀ ಎಂ. ವೀರಪ್ಪ ಮಾಯ್ಲೆ.—ಈ ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳುವ ಸಮೀಕ್ಷೆಯನ್ನು ನಾವು ನಡೆಸುತ್ತಿದ್ದೇವೆ. ಇಳ್ಕಲ್ ಕಮಟಗಿ ಈ ಎರಡು ಗ್ರಾಮಗಳಲ್ಲಿ ಸಮೀಕ್ಷೆ ನಡೆಸಿದೆ ಅಲ್ಲಿ 4799 ಲೂಮ್ಸ್ ನಡೆಯುತ್ತಿವೆ. ಒಟ್ಟು ಈ ಇಡೀ ಪ್ರಾಜೆಕ್ಟ್‌ನಲ್ಲಿ 13 ಸಾವಿರ ಹ್ಯಾಂಡ್‌ಲೂಮ್ಸ್‌ನ್ನು ಅಳವಡಿಸಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇದರ ಕರಡು ಪ್ರತಿಯನ್ನು ಈಗಾಗಲೇ ತಯಾರು ಮಾಡಿದ್ದೇವೆ. ಮಾರ್ಚ್ 1976ರೊಳಗಾಗಿ ಈ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಎಂ. ಹೊರಕೇರಿ.—ಸ್ವಾಮಿ, ತಾವು ಹಾಕಿಕೊಂಡಿರುವ ಈ ಯೋಜನೆಯಲ್ಲಿ ಇಳ್ಕಲ್, ಗುಳೇದಗುಡ್ಡ, ಕಮಟಗಿ, ಅಮೀನಗಡ, ಸೂಳಿಬಾವಿ, ಗುಡೂರು, ತಟಗೇರಿ, ಕೋಕನಕೊಪ್ಪ, ಇವೆಲ್ಲವೂ ಬರುತ್ತವೆಯೇ ?

ಶ್ರೀ ಎಂ. ವೀರಪ್ಪ ಮೊಯಲೆ.—ಈ ಯೋಜನೆಗೆ ಸೆಂಟ್ರರ್ ಅಸಿಸ್ಟೆನ್ಸ್ ಸಿಕ್ಕಿದೆ. ಇದರ ಕರಡು ಪ್ರತಿಯನ್ನು ತಯಾರು ಮಾಡಿದ್ದೇವೆ. ಇದನ್ನು ಹ್ಯಾಂಡ್‌ಲೂಂ ಕಾರ್ಪೊರೇಷನ್ ಬೋರ್ಡ್‌ನ ಮುಂದಿಟ್ಟು ಪಾಸ್ ಆದಮೇಲೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ.

ಶ್ರೀ ಪಿ. ಮುನಿಯಪ್ಪ.—ಸ್ವಾಮಿ, ಕೈಮಗ್ಗದ ನೇಕಾರರು ಯಂತ್ರದ ಬಟ್ಟೆ ನೇಕಾರರ ಮೇಲೆ ಹೈಪೋಟಿ ನಡೆಸುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಯಂತ್ರದ ಬಟ್ಟೆ ನೇಕಾರರು ಇಂಥಾದ್ದೇ ಬಟ್ಟೆಯನ್ನು ತಯಾರು ಮಾಡಬೇಕೆಂದು ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಲೆ.— ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ವೀವರ್ಸ್ ಸಂಸಾರಗಳ ಬಗ್ಗೆ ಐಡೆಂಟಿಫಿಕೇಷನ್ ಸರ್ವೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಇದೇ ರೀತಿ ವೀವರ್ಸ್ ಸಂಸಾರಗಳನ್ನು ಐಡೆಂಟಿಫೈ ಮಾಡುವ ಕೆಲಸ ಜೇರೆ ಡಿಸ್ಟ್ರಿಕ್ಟ್‌ಗಳಲ್ಲಿಯೂ ನಡೆದಿದೆಯೇ ? ಕೆಲವು ಕಡೆ ಈ ಸರ್ವೆ ಕೆಲಸ ನಡೆದಿಲ್ಲ ಎಂದು ತಿಳಿದು ಬಂದಿದೆ. ಎಲ್ಲಾ ಕಡೆಯೂ ಸಮಗ್ರ ಸರ್ವೆ ನಡೆಸಿ ನಮಗೆ ತಿಳುವಳಿಕೆ ಕೊಡುವುದಕ್ಕೆ ಸಾಧ್ಯವಿದೆಯೆ ?

ಶ್ರೀ ಎಂ. ವೀರಪ್ಪ ಮೊಯಿಲೆ.—ಸಾಮಾನ್ಯವಾಗಿ ಈ ಸರ್ವೆ ಕೆಲಸ ಇಡೀ ಕರ್ನಾಟಕದಲ್ಲಿಯೇ ನಡೆದಿದೆ. ಆದರೆ ಅದು ಸರಿಯಾಗಿಲ್ಲವೆಂದು ತಿಳಿದುಕೊಂಡು ಎಲ್ಲೆಲ್ಲ ಈ ನೇಕಾರರು ಕೇಂದ್ರೀಕೃತ ವಾಗಿದ್ದರೆ ಅಂಥ ಪ್ರದೇಶಗಳಲ್ಲಿ ಇಂಟೆನ್ಸಿವ್ ಸರ್ವೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಕೂಡಲೇ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ಎಂ. ಹೊರಕೇರಿ.—ಸ್ವಾಮಿ, ಇಳ್ಕಲ್ ಕೇಂದ್ರದಲ್ಲಿ ಮತ್ತು ಗುಳೇದಗುಡ್ಡ ಕೇಂದ್ರದಲ್ಲಿ ಸೀರೆ ಇತ್ಯಾದಿ ಹೆಣ್ಣು ಮಕ್ಕಳ ಬಟ್ಟೆಗಳನ್ನು ವಿಶೇಷವಾಗಿ ತಯಾರು ಮಾಡುತ್ತಿದ್ದಾರೆ. ಆದರೆ ಬಿಳಿ ಬಟ್ಟೆಯನ್ನು ಮಾತ್ರ ತಯಾರಿಸುತ್ತಿಲ್ಲ. ಮುಂದಿನ ವರ್ಷ ಹಿಂದೂ ಸಂಪ್ರದಾಯದ ಪ್ರಕಾರ ಲಗ್ನಗಳಲ್ಲಿ ಎಂದು ಕಾಣುತ್ತದೆ. ಈಗ ಹೆಚ್ಚಿನ ಬೇಡಿಕೆ ಹೆಣ್ಣು ಮಕ್ಕಳ ಬಟ್ಟೆಗೆ ಇರು. ವುದರಿಂದ ಅದನ್ನು ತಯಾರಿಸುತ್ತಿದ್ದಾರೆ. ಆದರೆ ಮುಂದಿನ ವರ್ಷ ಈ ಬಟ್ಟೆಗಳಿಗೆ ಬೇಡಿಕೆ ಇಲ್ಲದೇ ಹೋಗುವುದರಿಂದ ಅವರಿಗೆ ಕೆಲಸ ಇಲ್ಲದಂತಾಗಿ ಆಗ ಒಂದು ರೀತಿಯ ಬರಗಾಲವೇ ಬರುವಂತಹ ಸಂದರ್ಭ ಇರುವುದರಿಂದ ಆಗ ಇದರ ಬಗ್ಗೆ ಏನಾದರೂ ಒಂದು ನೂಕ್ಷ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲೆ.—6 ಗ್ರಾಮಗಳಿಗೆ ಈ ಯೋಜನೆಯನ್ನು ವಿಸ್ತರಿಸ ಬೇಕೆಂದಿದ್ದರೂ ಕೂಡ ನಮ್ಮಾಕ್ಷೆ ನಡೆಸಿರತಕ್ಕ ಕೆಲವು ತಾಲ್ಲೂಕುಗಳಿಗೆ ಹೋಗಿ ತಕ್ಷಣ ಈ ಯೋಜನೆ ಯನ್ನು ಕಾರ್ಯಗತ ಮಾಡುತ್ತೇವೆ.

N. R. W. S. Schemes in Chitradurga District

337 SMT. C. NAGAMMA KESHAVAMURTHY (Davanagere) —will the Minister for Public Works be pleased to state;—

(a) the number of N. R. W. S Scheme sanctioned in Chitradurga district (Talukwise list may be given);

(b) the number of N.R.W.S. Schemes completed and the schemes in respect of which the work is in progress (talukwise particulars may be given);

(c) the number of new N.R.W.S. Schemes proposed to be taken up (talukwise particulars may be furnished);

(d) whether the Government have received any application from Anaji, Yeragunte, Alur and Nerlagi in Davanagere taluk, if so. the action taken so far ;

(e) the total amount spent towards the N.R.W.S. Schemes in Chitradurga district during the last three years (taluwwise figures be furnished) ?

SRI. H. M. CHANNABASAPPA (Minister for Public Works).—

(a) 88 NRWS and S. Schemes were sanctioned in Chitradurga District. The Taluk-wise partieulars are indicated below :